ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – I	ಬೆಂಗಳೂರು, ಗುರುವಾರ, ಮಾರ್ಚ್ ೧೩, ೨೦೧೪ (ಫಾಲ್ಗುಣ ೨೨, ಶಕ ವರ್ಷ ೧೯೩೫)	ನಂ. ೨೨೬
Part – I	Bangalore, Thursday, March 13, 2014 (Phalguna 22, Shaka Varsha 1935)	No. 226

ಆರ್ಥಿಕ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಆಇ 3 ಸಿಇಟಿ 2013, ಬೆಂಗಳೂರು, ದಿನಾಂಕ: 13–03–2014

ವಿಷಯ: ಸಣ್ಣ ಕುಟುಂಬ ಯೋಜನೆಯಡಿ ಒಂದೇ ಮಗುವಿದ್ದು ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಕೊಂಡವರಿಗೆ ವೃತ್ತಿ ತೆರಿಗೆಯಿಂದ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ದಿನಾಂಕ: 19.3.2001ರ ಸುತ್ತೋಲೆ ಸಂಖ್ಯೆ: ಆಇ 17 ಸಿಪಿಟಿ 94.
2) ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಮೇಲ್ಮನವಿ ಸಂಖ್ಯೆ: 3720/95 ಮತ್ತು 4600/95ರಲ್ಲಿ ನೀಡಿದ ದಿನಾಂಕ: 17.6.1997ರ ಆದೇಶ.
3) ದಿನಾಂಕ: 27.10.2003ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ 4 ಸಿಪಿಟಿ 2003.

ಸರ್ಕಾರದ ದಿನಾಂಕ: 27.10.2003ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 4 ಸಿಪಿಟಿ 2003 ರನ್ವಯ ಒಂದೇ ಮಗು ಹೊಂದಿರುವ ಉದ್ಯೋಗಸ್ಥ ವ್ಯಕ್ತಿಯು ಪುರುಷನಾಗಿದ್ದಲ್ಲಿ 50 ವರ್ಷ ಮೀರುವ ಮೊದಲು ಮತ್ತು ಮಹಿಳೆಯಾಗಿದ್ದಲ್ಲಿ 45 ವರ್ಷ ಮೀರುವ ಮೊದಲು ಸಂತಾನಹರಣ ಶಸ್ತ್ರಕ್ರಿಯೆ ಮಾಡಿಕೊಂಡಿದ್ದ ಪಕ್ಷದಲ್ಲಿ ಮತ್ತು ತತ್ಸಂಬಂಧ ಸರ್ಕಾರಿ ಆಸ್ಪತ್ರೆಯ ಜಿಲ್ಲಾ ಸರ್ಜನ್‌ರವರಿಂದ ಪ್ರಮಾಣಪತ್ರ ಪಡೆದು ಸಲ್ಲಿಸಿದಲ್ಲಿ ಅಂತಹವರಿಗೆ ದಿನಾಂಕ: 27.10.2003 ರಿಂದ ವೃತ್ತಿ ತೆರಿಗೆ ವಿನಾಯಿತಿ ನೀಡಲಾಗಿರುತ್ತದೆ.

2) ಸದರಿ ಅಧಿಸೂಚನೆಯಂತೆ ಮೇಲ್ನೋಟಕ್ಕೆ ವೃತ್ತಿ ತೆರಿಗೆ ವಿನಾಯಿತಿಯು ಶಸ್ತ್ರ ಚಿಕಿತ್ಸೆಗೆ ಒಳಪಟ್ಟ ಉದ್ಯೋಗಸ್ಥ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ/ಪತ್ನಿ ಇವರು 50/45 ವರ್ಷಗಳನ್ನು ಮೀರುವವರೆಗೆ ಮಾತ್ರ ಲಭ್ಯವಿರುತ್ತದೆ ಎಂದು ಕಾಣುವುದರಿಂದ ಈ ಬಗ್ಗೆ ಸ್ಪಷ್ಟೀಕರಣ ಕೋರಲಾಗಿರುತ್ತದೆ.

3) ವಿಷಯವನ್ನು ಪರಿಶೀಲಿಸಲಾಗಿದೆ ಮತ್ತು ಮುಂದಿನಂತೆ ಸ್ಪಷ್ಟೀಕರಿಸಲಾಗಿದೆ.

(1) ವೃತ್ತಿ ತೆರಿಗೆಗೊಳಪಡುವ ದಂಪತಿಗಳ ಪೈಕಿ ಪತಿ/ಪತ್ನಿ ಇಬ್ಬರಲ್ಲಿ ಒಬ್ಬರು ಉದ್ಯೋಗಸ್ಥರಾಗಿದ್ದು, ಇಬ್ಬರಲ್ಲಿ ಒಬ್ಬರು (ಪುರುಷನಾಗಿದ್ದಲ್ಲಿ 50 ವರ್ಷದೊಳಗಾಗಿ, ಮಹಿಳೆಯಾಗಿದ್ದಲ್ಲಿ 45 ವರ್ಷದೊಳಗಾಗಿ) ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಟ್ಟಲ್ಲಿ,

ಈ ರೀತಿ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಪತಿ/ಪತ್ನಿ ಉದ್ಯೋಗಸ್ಥರಾಗಿಲ್ಲದಿದ್ದಾಗ್ಯೂ ಉದ್ಯೋಗಸ್ಥ ಪತಿ/ಪತ್ನಿಗೆ ದಿನಾಂಕ 27.10.2003ರ ಅಧಿಸೂಚನೆ ಸಂಖ್ಯೆ ಎಫ್‌ಡಿ 4 ಸಿಪಿಟಿ 2003ರಲ್ಲಿ ನೀಡಲಾದ ವೃತ್ತಿ ತೆರಿಗೆ ವಿನಾಯಿತಿಗೆ ಅವರು ತತ್ಸಂಬಂಧ ಸರ್ಕಾರಿ ಆಸ್ಪತ್ರೆಯ ಡಿಸ್ಟ್ರಿಕ್ಟ್ ಸರ್ಜನ್‌ರವರಿಂದ ಪ್ರಮಾಣೀಕರಿಸಲ್ಪಡುವ ಷರತ್ತುಗಳಿಗೆ ಒಳಪಟ್ಟು ವೃತ್ತಿ ತೆರಿಗೆ ವಿನಾಯಿತಿಗೆ ಅರ್ಹರಾಗುತ್ತಾರೆ.

(2) ಮೇಲೆ ಹೇಳಿದ ದಿನಾಂಕ 27.10.2003ರ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಯೋಮಿತಿ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಲು ಮಾತ್ರವಾಗಿದ್ದು, ಒಮ್ಮೆ ಅಂತಹ ವಯೋಮಿತಿಯ ಮುನ್ನ ಸಂತಾನ ಶಸ್ತ್ರಚಿಕಿತ್ಸೆಗೆ ಒಳಗಾದಲ್ಲಿ ಅಂತಹ ವ್ಯಕ್ತಿ ತನ್ನ ಪೂರ್ಣ ಸೇವಾವಧಿಯಲ್ಲಿ ವೃತ್ತಿ ತೆರಿಗೆ ವಿನಾಯಿತಿಗೆ ಅರ್ಹನಾಗಿರುತ್ತಾನೆ.

(3) ಮುಂದುವರೆದು, ಉಲ್ಲೇಖಿತ ಮಾನ್ಯ ಉಚ್ಚನ್ಯಾಯಾಲಯದ ತೀರ್ಪಿನಂತೆ ಹಾಗೂ ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಸ್ಪಷ್ಟೀಕರಿಸಿದಂತೆ ಒಂದು ಪಕ್ಷ ಪತಿ/ಪತ್ನಿ ಇಬ್ಬರೂ ಉದ್ಯೋಗಸ್ಥರಾಗಿದ್ದು, ಇಬ್ಬರಲ್ಲಿ ಯಾರಾದರೊಬ್ಬರು ಶಸ್ತ್ರಚಿಕಿತ್ಸೆಯನ್ನು ನಿಗದಿತ ವಯೋಮಿತಿಯೊಳಗೆ ಮಾಡಿಸಿಕೊಂಡಿದ್ದಲ್ಲಿ, ಇಬ್ಬರಲ್ಲಿ ಒಬ್ಬರು ಮಾತ್ರ ವೃತ್ತಿ ತೆರಿಗೆ ವಿನಾಯಿತಿಗೆ ಅರ್ಹರಾಗಿರುತ್ತಾರೆ.

ಆರ್. ಮೀನಾಕ್ಷಿ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಆರ್ಥಿಕ ಇಲಾಖೆ (ವಾ.ತೆ.1)

ವಿಶೇಷ ರಾಜ್ಯ ಪತ್ರಿಕೆ

ಭಾಗ – I	ಬೆಂಗಳೂರು, ಬುಧವಾರ, ಮಾರ್ಚ್ ೧೯, ೨೦೧೪ (ಫಾಲ್ಗುಣ ೨೮, ಶಕ ವರ್ಷ ೧೯೩೫)	ನಂ. ೨೩೧
Part – I	**Bangalore, Wednesday, March 19, 2014 (Phalguna 28, Shaka Varsha 1935)**	**No. 231**

ಆರ್ಥಿಕ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆಇ 03 ಸಿಪಿಟಿ 2013, ಬೆಂಗಳೂರು, ದಿನಾಂಕ: 19–03–2014

ಸರ್ಕಾರಿ ಸುತ್ತೋಲೆ ಸಂಖ್ಯೆ: ಆಇ 3 ಸಿಇಟಿ 2013, ದಿನಾಂಕ: 13–03–2014ರಲ್ಲಿ ನಮೂದಿಸಿರುವ ಕಡತ ಸಂಖ್ಯೆ **"ಆಇ 3 ಸಿಇಟಿ 2013"** ಬದಲಾಗಿ **"ಆಇ 03 ಸಿಪಿಟಿ 2013"** ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಆರ್. ಮೀನಾಕ್ಷಿ
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರಭಾರ)
ಆರ್ಥಿಕ ಇಲಾಖೆ (ವಾ.ತೆ.1)

ವಿಶೇಷ ರಾಜ್ಯ ಪತ್ರಿಕೆ

ಭಾಗ – I	ಬೆಂಗಳೂರು, ಶುಕ್ರವಾರ, ಮಾರ್ಚ್ ೨೮, ೨೦೧೪ (ಚೈತ್ರ ೭, ಶಕ ವರ್ಷ ೧೯೩೫)	ನಂ. ೨೪೬
Part – I	**Bangalore, Friday, March 28, 2014 (Chaithra 7, Shaka Varsha 1935)**	**No. 246**

FINANCE SECRETARIAT

PROCEEDINGS OF THE GOVERNMENT OF KARNATAKA

Subject : Waiver of interest due from M/s Hindustan Aeronautics Limited, Bangalore in respect of years 2011-12, 2012-13 and 2013-14 Upto 13.11.2013) under Sec.42 (5) of the KVAT Act, 2003.

PREAMBLE:

1. There is a dispute with Hindustan Aeronautics Limited (HAL) in respect of commercial tax dues payable by the company on its sales to the armed forces of the country. The dispute pertains to sale, maintenance, repair and overhaul of aircrafts, helicopters and their parts during the period from 1994-95 onwards.

2. HAL has been claiming that the company was purchasing raw materials and other inputs on behalf of Ministry of Defence mostly under sovereign agreements of Government of India with other Countries and foreign suppliers and was supplying the finished products in the form of aircrafts, helicopters and parts. The maintenance, repair and overhaul of aircrafts and helicopters are also claimed to involve mainly the labour. In view of these claims, HAL was treating its supplies to the armed forces as not being subject to Sales Tax and Value Added Tax. The changes effected in the 1990s in the contract conditions for supplies of aircrafts and related equipment by HAL to the armed forces led to the tax dispute between HAL and Commercial Taxes Department of the State Government for the period 1994-95 onwards. Those changes made the supplies as sales subject to sales tax.

3. The tax dispute went through several steps of assessment and appeal. The position of the State Government was upheld in the High Court. In the Special Leave Petition (SLP) filed by HAL, Hon'ble Supreme Court directed Secretary (Defence Production), Government of India and Chief Secretary in January 2011 to resolve the issues arising for consideration of the Court.

4. As per Government of India, these liabilities have arisen due to change in the contracts for the supplies meant for the defence of the country and would adversely impact the current budget for the armed forces. HAL has made significant contribution to the state's economy through local outsourcing and vendor development. The State Government should continue to support future expansion of HAL's operations in the state in line with its support to the Aerospace Industry largely driven by HAL. Government of India also feels that levy of tax on design and development activities of HAL would go against the larger interests of the country in its efforts for indigenisation.

5. Tax revenues are the most important source for funding sovereign and development commitments of the State Government. While the Government of Karnataka places a very high reliance on the tax revenues that are legally due, the State Government is also aware that most of the sales of HAL are for defence of the country and HAL has contributed significantly to the State's economy. Such sales should be taxed moderately without making excessive addition to the cost of the supplies for the armed forces.

6. HAL has given an assurance that Karnataka will continue to be the preferred destination for future investments by HAL. The company has plans to invest more than Rs.9500 crore in Karnataka during the 12th and 13th Five Year Plans which should lead to generation of additional direct employment for 5000 persons in the State. The above assurance has the potential to generate substantial employment in the State directly and indirectly. This will also enable HAL to play role of an anchor the Aerospace Industry in the State.

7. It has been agreed between Government of India and Government of Karnataka that the dispute can be settled in public interest as per following package.

Past period

i. Tax at 4% upto Financial Year 2009-10, Tax at 5% from the Financial Year 2010-11 to 31.7.2012 and Tax at 5.5% from 1.8.2012 till the date of issue of a notification prescribing any lower rate for the future will be levied.

ii. The balance tax liability will be waived by the State Government by providing an equal grant to HAL, subject to approval of the State Legislature.

iii. Interest at 0.5% per month on tax dues of Financial Years upto 2004-05 will be levied.

iv. The balance interest liability (over and above 0.5%) on the tax dues of financial years upto 2004-05 will be waived by providing an equal grant to HAL, subject to approval of the State Legislature.

v. Interest on tax dues from Financial Year 2005-06 onwards will be waived.

vi. Complete penalty amount for the past period will be waived by providing an equal grant to HAL, subject to approval of the State Legislature.

Future period

i. VAT at 2% will be levied on sale of aircrafts, etc., by HAL for Defence and Internal Security needs of Government of India from the date of issue of notification prescribing such lower rate.

ii. Tax due for the future period after the issue of notification should be paid as per the prescribed payment norms.

Tax exemption to Prototypes

iii. Prototype and associated design and development related sales of HAL for defence and internal security needs of Government of India will be exempted from VAT.

8. This settlement package was brought to notice of Hon'ble Supreme Court which disposed the SLP on 12.11.2013 in terms of the understanding reached. The settlement of the dispute is in overall interest of the State's economy, serves a public purpose, and meets the perspectives of Government of India and Government of Karnataka.

9. As per the settlement package, there is no waiver of the sales tax dues, while value added tax dues for the period from 2005-06 to 2013-14 (upto 13.11.2013) will have to be waived to an extent of difference between the higher rate (12.5 / 13.5 / 14 / 14.5 percent) as per the law and the lower rate (4 / 5 / 5.5 percent) agreed in the package.

10. Following are the details of the total tax liabilities as per the law, total amount to be paid by HAL as per the settlement package, and the total amount to be waived by the State Government for the entire period of dispute from 1994-95 to 2013-14.

(Rs in crore)

Sl No.		Tax	Interest	Penalty	Total
1	Tax Liability as per the Law or period from 1994-95 to 2013-14(upto 13.11.2013)	2896.06	1250.71	350.15	4496.92
2	Amount payable by HAL as per agreed settlement package	1240.17	66.93	0	1307.10
3	Amount to be waived by the State Govt. through grants or administrative order (1-2)	1655.89	1183.77	350.15	3189.82
4	Amount already paid by HAL	932.95	0	0	932.95
5	Balance Amount yet to be paid by HAL (2-4)	307.21	66.93	0	374.15

11. HAL has paid the tax dues as per the settlement package for the financial years 2011-12, 2012-13 and 2013-14. Section 42 (5) of the KVAT Act, 2003 provides that the Government may, subject to such conditions as they may specify, remit by an order the whole or any part of the interest payable in respect of any period by any person or class of persons. In terms of the settlement package, interest amount of Rs. 370.22 crore payable of HAL for the years 2011-12, 2012-13 and 2013-14 needs to be waived. On payment of balance amounts payable by HAL for other years the issue of providing waiver of corresponding interest payable by HAL would be considered.

12. Hence the following order.

GOVERNMENT ORDER NO.FD 15 CSL 2011, DATED: 28/03/2014

Government is pleased to remit an amount of Rs. 370,22,44,311 payable by M/s Hindustan Aeronautics Limited, Bangalore as interest on the tax dues for the years 2011-12, 2012-13 and 2013-14 in exercise of powers conferred under Section 42(5) of the KVAT Act 2003.

By order and in the name of the Governor of Karnataka,

R. MEENAKSHI
Under Secretary to Government(I/c)
Finance Department (C.T.-1)

ವಿಶೇಷ ರಾಜ್ಯ ಪತ್ರಿಕೆ

ಭಾಗ – I	ಬೆಂಗಳೂರು, ಶುಕ್ರವಾರ, ಮಾರ್ಚ್ ೨೮, ೨೦೧೪ (ಚೈತ್ರ ೭, ಶಕ ವರ್ಷ ೧೯೩೫)	ನಂ. ೨೪೭
Part – I	**Bangalore, Friday, March 28, 2014 (Chaithra 7, Shaka Varsha 1935)**	**No. 247**

FINANCE SECRETARIAT

PROCEEDINGS OF THE GOVERNMENT OF KARNATAKA

Subject: Grant-in-Aid to M/s Hindustan Aeronautics Limited, Bangalore to enable waiver of tax and penalty dues in respect of years 2011-12, 2012-13 and 2013-14 (upto 13.11.2013).

Preamble:

1. There is a dispute with Hindustan Aeronautics Limited (HAL) in respect of commercial tax dues payable by the company on its sales to the armed forces of the country. The dispute pertains to sale, maintenance, repair and overhaul of aircrafts, helicopters and their parts during the period from 1994-95 onwards.

2. HAL has been claiming that the company was purchasing raw materials and other inputs on behalf of Ministry of Defence mostly under sovereign agreements of Government of India with other Countries and foreign suppliers and was supplying the finished products in the form of aircrafts, helicopters and parts. The maintenance, repair and overhaul of aircrafts and helicopters are also claimed to involve mainly the labour. In view of these claims, HAL was treating its supplies to the armed forces as not being subject to Sales Tax and Value Added Tax. The changes effected in the 1990s in the contract conditions for supplies of aircrafts and related equipment by HAL to the armed forces led to the tax dispute between HAL and Commercial Taxes Department of the State Government for the period 1994-95 onwards. Those changes made the supplies as sales subject to sales tax.

3. The tax dispute went through several steps of assessment and appeal. The position of the State Government was upheld in the High Court. In the Special Leave Petition (SLP) filed by HAL, Hon'ble Supreme Court directed Secretary (Defence Production), Government of India and Chief Secretary in January 2011 to resolve the issues arising for consideration of the Court.

4. As per Government of India, these liabilities have arisen due to change in the contracts for the supplies meant for the defence of the country and would adversely impact the current budget for the armed forces. HAL has made significant contribution to the state's economy through local outsourcing and vendor development. The State Government should continue to support future expansion of HAL's operations in the state in line with its support to the Aerospace Industry largely driven by HAL. Government of India also feels that levy of tax on design and development activities of HAL would go against the larger interests of the country in its efforts for indigenisation.

5. Tax revenues are the most important source for funding sovereign and development commitments of the State Government. While the Government of Karnataka places a very high reliance on the tax revenues that are legally due, the

State Government is also aware that most of the sales of HAL are for defence of the country and HAL has contributed significantly to the State's economy. Such sales should be taxed moderately without making excessive addition to the cost of the supplies for the armed forces.

6. HAL has given an assurance that Karnataka will continue to be the preferred destination for future investments by HAL. The company has plans to invest more than Rs.9500 crore in Karnataka during the 12th and 13th Five Year Plans which should lead to generation of additional direct employment for 5000 persons in the State. The above assurance has the potential to generate substantial employment in the State directly and indirectly. This will also enable HAL to play role of an anchor the Aerospace Industry in the State.

7. It has been agreed between Government of India and Government of Karnataka that the dispute can be settled in public interest as per following package.

Past period

i. Tax at 4% upto Financial Year 2009-10, Tax at 5% from the Financial Year 2010-11 to 31.7.2012 and Tax at 5.5% from 1.8.2012 till the date of issue of a notification prescribing any lower rate for the future will be levied.

ii. The balance tax liability will be waived by the State Government by providing an equal grant to HAL, subject to approval of the State Legislature.

iii. Interest at 0.5% per month on tax dues of Financial Years upto 2004-05 will be levied.

iv. The balance interest liability (over and above 0.5%) on the tax dues of financial years upto 2004-05 will be waived by providing an equal grant to HAL, subject to approval of the State Legislature.

v. Interest on tax dues from Financial Year 2005-06 onwards will be waived.

vi. Complete penalty amount for the past period will be waived by providing an equal grant to HAL, subject to approval of the State Legislature.

Future period

iv. VAT at 2% will be levied on sale of aircrafts, etc., by HAL for Defence and Internal Security needs of Government of India from the date of issue of notification prescribing such lower rate.

v. Tax due for the future period after the issue of notification should be paid as per the prescribed payment norms.

Tax exemption to Prototypes

vi. Prototype and associated design and development related sales of HAL for defence and internal security needs of Government of India will be exempted from VAT.

8. This settlement package was brought to notice of Hon'ble Supreme Court which disposed the SLP on 12.11.2013 in terms of the understanding reached. The settlement of the dispute is in overall interest of the State's economy, serves a public purpose, and meets the perspectives of Government of India and Government of Karnataka.

9. As per the settlement package, there is no waiver of the sales tax dues, while value added tax dues for the period from 2005-06 to 2013-14 (upto 13.11.2013) will have to be waived to an extent of difference between the higher rate (12.5 / 13.5 / 14 / 14.5 percent) as per the law and the lower rate (4 / 5 / 5.5 percent) agreed in the package.

10. Following are the details of the total tax liabilities as per the law, total amount to be paid by HAL as per the settlement package, and the total amount to be waived by the State Government for the entire period of dispute from 1994-95 to 2013-14.

(Rs in crore)

Sl No.		Tax	Interest	Penalty	Total
1	Tax Liability as per the Law for period from 1994-95 to 2013-14 (upto 13.11.2013)	2896.06	1250.71	350.15	4496.92
2	Amount payable by HALas per agreed settlement package	1240.17	66.93	0	1307.10
3	Amount to be waived by the State Govt. through grants or administrative order (1-2)	1655.89	1183.77	350.15	3189.82
4	Amount already paid by HAL	932.95	0	0	932.95
5	Balance Amount yet to be paid by HAL (2-4)	307.21	66.93	0	374.15

11. Karnataka Sales Tax (KST) Act, Karnataka Value Added Tax (KVAT) Act and Central Sales Tax Act do not have any provision for waiver of the tax and penalty dues, while KVAT Act has a provision to waive interest dues. In view of these limitations, the settlement package is sought to be implemented, as committed before the Hon'ble Supreme Court, by providing required grant-in-aid to HAL, subject to approval of the State Legislature, for enabling it to pay the tax and penalty agreed to be waived by the State Government, and by waiving the interest dues as per provision in KVAT Act using the powers.

12. HAL has paid the tax dues as per the settlement package for the financial years 2011-12, 2012-13 and 2013-14. Approval of the State Legislature has been obtained through Karnataka Appropriation Act 2014 No.16 for providing a grant-in-aid of Rs. 100852.69 lakh to HAL in public interest to enable it to pay the balance tax and penalty dues for these three years to the State Government and thereby giving effect to the assurance on waiver of the concerned liabilities. On payment of balance amounts payable by HAL for other years, the issue of providing grant-in-aid to HAL for payment of corresponding tax and penalty dues would be considered.

13. Hence the following order.

GOVERNMENT ORDER NO.FD 15 CSL 2011, DATED: 28/03/2014

1) Government is pleased to sanction a grant-in-aid of Rs. 100852.69 lakhs to M/s Hindustan Aeronautics Limited, Bangalore in public interest to enable the company to pay its tax and penalty dues to State Government for the years 2011-12 to 2013-14 (upto 13.11.2013) over and above the tax already paid by the company as per the settlement package.

2) The expenditure on the grant-in-aid will be met from the budget provision under head of account 2040-00-101-0-o4-"Grant for waiver of Tax dues" - 103 "Grant-in-Aid General".

3) The grant-in-aid will not be paid in cash. Instead it will be adjusted against the tax and penalty dues payable by HAL for 2011-12, 2012-13 and 2013-14 and credited to head of account 0040-00-101-0-03 "Central Sales Tax".

4) The Principal Accountant General will carry necessary adjustments in the Finance Accounts for 2013-14.

By order and in the name of the Governor of Karnataka,

R. MEENAKSHI
Under Secretary to Government(I/c)
Finance Department (C.T.-1)

ವಿಶೇಷ ರಾಜ್ಯ ಪತ್ರಿಕೆ

ಭಾಗ – I	ಬೆಂಗಳೂರು, ಗುರುವಾರ, ಏಪ್ರಿಲ್ ೩, ೨೦೧೪ (ಚೈತ್ರ ೧೩, ಶಕ ವರ್ಷ ೧೯೩೬)	ನಂ. ೨೫೬
Part – I	**Bangalore, Thursday, April 3, 2014 (Chaithra 13, Shaka Varsha 1936)**	**No. 256**

ನಗರಾಭಿವೃದ್ಧಿ ಸಚಿವಾಲಯ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯ/ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ವಯ ಪುನರ್ ಪರಿಷ್ಕೃತ ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:–

1) ಸರ್ಕಾರದ ಆದೇಶ ಸಂಖ್ಯೆ:ನಅಇ 193 ಬೆಂಭೂಸ್ವಾ 2004, ದಿನಾಂಕ:21–02–2004.

2) ಸರ್ಕಾರದ ಅಂತಿಮ ಅಧಿಸೂಚನೆ ಸಂಖ್ಯೆ:ನಅಇ 193 ಬೆಂಭೂಸ್ವಾ 2004, ದಿನಾಂಕ: 23–02–2004.

3) ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:26601–04/2004 ಮತ್ತು ಇತರೆ ಪ್ರಕರಣಗಳಲ್ಲಿ, ದಿನಾಂಕ:15–04–2005ರ ಆದೇಶ.

4) ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅಪೀಲ್ ಸಂಖ್ಯೆ:2624–25/2005, ದಿನಾಂಕ: 25–11–2005.

5) ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:9232/2006, ದಿನಾಂಕ: 23–08–2006.

6) ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:4097/2010, ದಿನಾಂಕ: 05–05–2010.

7) ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 174 ಎಂಎನ್‌ಜೆ 2010, ದಿನಾಂಕ: 04–06–2010.

8) ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ. 17278–85/2013 (ಎಲ್‌ಎ–ಬಿಡಿಎ) ದಿನಾಂಕ 19.04.2013 ರ ತೀರ್ಪು.

9) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಪತ್ರ ಸಂಖ್ಯೆ: ಬೆಂಅಪ್ರಾ/ ಆಯು/ 22/2013–14, ದಿನಾಂಕ:30–04–2013,

10) ಸರ್ಕಾರದ ಪತ್ರ ಸಂ. ನಅಇ 426 ಬೆಂಆಸೇ 2011 ದಿನಾಂಕ 16.05.2013

11) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಪತ್ರ ಸಂಖ್ಯೆ: ಬೆಂಅಪ್ರಾ/ಆಯು/26/13–14 ದಿನಾಂಕ 07.05.2013, ಬೆಂಅಪ್ರಾ/ಆಯು/44/2013–14 ದಿನಾಂಕ 24.05.2013, ಸಂ.ಬೆಂಅಪ್ರಾ/ಆಯು/65/2013–14 ದಿನಾಂಕ 03.06.2013, ಪತ್ರ ಸಂಖ್ಯೆ: ಬೆಂಅಪ್ರಾ/ಆಯುಕ್ತರು/185/2013–14 ದಿನಾಂಕ 17.09.2013, ಬೆಂಅಪ್ರಾ/ಆಯುಕ್ತರು/226/2013–14 ದಿನಾಂಕ 26.10.2013, ಬೆಂಅಪ್ರಾ/ಆಯುಕ್ತರು/308/2013–14 ದಿನಾಂಕ 07.01.2014, ಸಂ. ಬೆಂಅಪ್ರಾ/ಆಯುಯಕ್ತರು/325/2013–14 ದಿನಾಂಕ 21.01.2014 ಮತ್ತು ಬೆಂಅಪ್ರಾ/ಆಯು/354/2013–14 ದಿನಾಂಕ 13.02.2014.

12) ಸರ್ಕಾರದ ಪತ್ರ ಸಂ. ನಅಇ 426 ಬೆಂಆಸೇ 2011 ದಿನಾಂಕ 23.09.2013, 27.12.2013, 17.01.2014, 12.02.2014

13) ಸರ್ಕಾರದ ಪತ್ರ ಸಂ. ನಅಇ 426 ಬೆಂಆಸೇ 2011 ದಿನಾಂಕ 19.03.2014

14) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಪತ್ರ ಸಂಖ್ಯೆ: ಬೆಂಅಪ್ರಾ/ಆಯುಕ್ತರು/397/2013–14 ದಿನಾಂಕ 27.03.2014

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 21–02–2004 ರ ಆದೇಶದಲ್ಲಿ ಅರ್ಕಾವತಿ ಬಡಾವಣೆ ರಚನೆಗಾಗಿ ವಿವಿಧ ಗ್ರಾಮಗಳ ಒಟ್ಟು 2750 ಎಕರೆ ಜಮೀನಿನಲ್ಲಿ ಯೋಜನೆ ಕೈಗೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976ರ ಕಲಂ 18(3)ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲೆ (2) ರಲ್ಲಿ ಓದಲಾದ ದಿನಾಂಕ: 23–02–2004 ರ ಅಧಿಸೂಚನೆಯಲ್ಲಿ ವಿವಿಧ ಗ್ರಾಮಗಳ ಒಟ್ಟು 2750 ಎಕರೆ ಜಮೀನಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976ರ ಕಲಂ 19(1) ರನ್ವಯ ಅರ್ಕಾವತಿ ಬಡಾವಣೆ ರಚನೆಗಾಗಿ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮೇಲೆ (3) ರಲ್ಲಿ ಓದಲಾದ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:26601–04/2004 ಮತ್ತು ಇತರೆ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:15–04–2005 ರ ಆದೇಶದಲ್ಲಿ ಅರ್ಕಾವತಿ ಬಡಾವಣೆ ರಚನೆಗಾಗಿ ಅಧಿಸೂಚಿತಗೊಂಡಿದ್ದ ಭೂಸ್ವಾಧೀನ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಿದೆ.

ಮೇಲೆ (4) ರಲ್ಲಿ ಓದಲಾದ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅಪೀಲ್ ಸಂಖ್ಯೆ:2624–25/2005, ದಿನಾಂಕ: 25–11–2005 ರಂದು ನೀಡಿರುವ ತೀರ್ಪಿನಲ್ಲಿ 6 ಮಾರ್ಗಸೂಚಿಗಳಡಿ ಬರುವ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರತುಪಡಿಸಿ ಪರಿಷ್ಕೃತ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಹಾಗೂ ಸದರಿ ಯೋಜನೆಗೆ ಸರ್ಕಾರವು ಸೂಕ್ತ ಮಾರ್ಪಾಡು ಆದೇಶವನ್ನು ಹೊರಡಿಸಲು ಆದೇಶಿಸಿದೆ.

ಮೇಲೆ (5) ರಲ್ಲಿ ಓದಲಾದ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:9232/2006, ದಿನಾಂಕ:23–08–2006ರ ಆದೇಶದಲ್ಲಿ 6 ಮಾರ್ಗಸೂಚಿಗಳಡಿಯಲ್ಲಿ ಬರುವ ಜಮೀನುಗಳ ಬಗ್ಗೆ ಯಾವ ರೀತಿ ಮರು ವಿಚಾರಣೆ ನಡೆಸಬೇಕೆಂದು ಮಾರ್ಗಸೂಚಿಗಳನ್ನು ರೂಪಿಸಿ ಆದೇಶಿಸಿದೆ.

ಮೇಲೆ (6) ರಲ್ಲಿ ಓದಲಾದ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:4097/2010, ದಿನಾಂಕ: 05–05–2010ರ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ದಿನಾಂಕ:25–11–2005ರ ಆದೇಶವನ್ನು ಎತ್ತಿ ಹಿಡಿದಿರುತ್ತದೆ.

ಮೇಲೆ (7) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿಡಿ 174 ಎಂಎನ್‌ಜೆ 2010, ದಿನಾಂಕ: 04–06–2010 ರಂತೆ ಮಾನ್ಯ ವಿಭಾಗೀಯ ಪೀಠವು ಸೂಚಿಸಿರುವ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು, ಭೂಸ್ವಾಧೀನಾಧಿಕಾರಿಗಳಿಗೆ ಮತ್ತೊಮ್ಮೆ ಮರು ವಿಚಾರಣೆ ನಡೆಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ ಹಾಗೂ ಭೂಸ್ವಾಧೀನ ಕಾಯ್ದೆಯನ್ವಯ ಪ್ರದತ್ತವಾದ ಅಧಿಕಾರದನ್ವಯ ಸೂಕ್ತ ಆದೇಶ ಹೊರಡಿಸಲು ಅಧಿಸೂಚನೆ ಹೊರಡಿಸಲಾಗಿದೆ.

ಮೇಲೆ (8) ರಲ್ಲಿ ಓದಲಾದ ದಿನಾಂಕ 19.04.2013 ರ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ. 17278–85/2013 (ಎಲ್‌ಎ–ಬಿಡಿಎ) ರಲ್ಲಿ ವಿಭಾಗೀಯ ಪೀಠ ಹಾಗೂ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ಪ್ರಾಧಿಕಾರವು ನಾಲ್ಕು ವಾರದೊಳಗಾಗಿ ಜಮೀನನ್ನು ಹೊರತುಪಡಿಸಲು ತೆಗೆದುಕೊಂಡಿರುವ ಠರಾವು ಸಂ. 79/2013 ನ್ನು ಸರ್ಕಾರಕ್ಕೆ ಕಳುಹಿಸುವಂತೆ ಹಾಗೂ ಸರ್ಕಾರವು ಈ ಬಗ್ಗೆ 15 ದಿನಗಳೊಳಗಾಗಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಆದೇಶಿಸಿದೆ.

ಮೇಲೆ (9) ರಲ್ಲಿ ಓದಲಾದ ದಿನಾಂಕ 30.04.2013 ರ ಪ್ರಸ್ತಾವನೆಯಲ್ಲಿ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ಪ್ರಾಧಿಕಾರದ ವಿಷಯ ಸಂ. 79/2013 ದಿನಾಂಕ 12.02.2013 ರಂತೆ ಅರ್ಕಾವತಿ ಬಡಾವಣೆಯ ಪರಿಷ್ಕೃತ ಯೋಜನೆಯ ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲೆ (10) ರಲ್ಲಿ ಓದಲಾದ ಸರ್ಕಾರದ ದಿನಾಂಕ 16.05.2013 ರ ಪತ್ರದಲ್ಲಿ ಹಲವು ಅಂಶಗಳ ಜೊತೆಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲು ಗ್ರಾಮವಾರು ಮತ್ತು ವಿಸ್ತೀರ್ಣವಾರು ವಿವರಗಳನ್ನು ಸ್ಪಷ್ಟ ಶಿಫಾರಸ್ಸಿನೊಂದಿಗೆ ಕಳುಹಿಸುವಂತೆ ಪ್ರಾಧಿಕಾರವನ್ನು ಕೋರಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment WPP No. 297

ಮೇಲೆ (11) ರಲ್ಲಿ ಓದಲಾದ ದಿನಾಂಕ 24.05.2013 ರ ಪತ್ರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸರ್ಕಾರದ ಪತ್ರ ದಿನಾಂಕ 16.05.2013 ರಲ್ಲಿ ಕೋರಿರುವ ಅಂಶಗಳಿಗೆ ಮಾಹಿತಿಯನ್ನು ಒದಗಿಸಿರುತ್ತಾರೆ. ಹಾಗೆಯೇ ಪ್ರಸ್ತಾವನೆಗೆ ಸಂಬಂಧಿಸಿದಂತೆ ಹಲವಾರು ಅಂಶಗಳಿಗೆ ಮಾಹಿತಿ/ವರದಿಯನ್ನು ಸಲ್ಲಿಸಿರುತ್ತಾರೆ.

ಮೇಲೆ (12) ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಹೆಚ್ಚುವರಿ ಮಾಹಿತಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸಲು ಪ್ರಾಧಿಕಾರಕ್ಕೆ ಸೂಚಿಸಲಾಯಿತು.

ಮೇಲೆ (13) ರಲ್ಲಿ ಓದಲಾದ ಸರ್ಕಾರದ ದಿನಾಂಕ 19.03.2014 ರ ಪತ್ರದಲ್ಲಿ ಅರ್ಕಾವತಿ ಬಡಾವಣೆಯ ಪರಿಷ್ಕೃತ ಯೋಜನೆಯ ಪ್ರಾಧಿಕಾರದ ವರದಿ ಕುರಿತು ಮಾನ್ಯ ನ್ಯಾಯಾಲಯಗಳ ಆದೇಶಗಳು, ಪ್ರಾಧಿಕಾರದ ನಿರ್ಣಯಗಳು, ಭೂಸ್ವಾಧೀನಾಧಿಕಾರಿಗಳ ಆದೇಶ / ಶಿಫಾರಸ್ಸುಗಳನ್ವಯ ಪ್ರಾಧಿಕಾರವು ತೆಗೆದುಕೊಂಡ ಕ್ರಮವನ್ನು ದೃಢೀಕರಿಸಲು ಸೂಚಿಸಲಾಗಿರುತ್ತದೆ.

ಮೇಲೆ (14) ರಲ್ಲಿ ಓದಲಾದ ದಿನಾಂಕ 27.03.2014 ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಸ್ತಾವನೆಯಲ್ಲಿ ಅರ್ಕಾವತಿ ಬಡಾವಣೆಯ ಪುನರ್ ಪರಿಷ್ಕೃತ ಯೋಜನೆಗೆ ಸಂಬಂಧಿಸಿದಂತೆ ವಿವರವಾದ ಪ್ರಸ್ತಾವನೆಯನ್ನು ದಾಖಲಾತಿಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸುತ್ತಾ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಭೂಸ್ವಾಧೀನದಿಂದ ಹೊರತುಪಡಿಸಲು ತೆಗೆದುಕೊಂಡಿರುವ ಎಲ್ಲಾ ಪ್ರಕರಣಗಳಲ್ಲಿ ನ್ಯಾಯಾಲಯಗಳ ಆದೇಶದನ್ವಯ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಹಾಗೂ ಭೂಸ್ವಾಧೀನಾಧಿಕಾರಿಗಳು ಮರುವಿಚಾರಣೆ ನಡೆಸಿ, ಆದೇಶಗಳನ್ನು ಹೊರಡಿಸಿರುತ್ತಾರೆಂದು ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರು ದೃಢೀಕರಿಸಿ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಅದರಂತೆ, ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ನಅಇ 426 ಬೆಂಆಸೇ 2011, ದಿನಾಂಕ: 03/04/2014.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅರ್ಕಾವತಿ ಬಡಾವಣೆ ರಚನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಿರುವ 1766 ಎಕರೆ 07 ಗುಂಟೆ ಜಮೀನುಗಳ ಪುನರ್ ಪರಿಷ್ಕೃತ ಯೋಜನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ, 1976ರ ಕಲಂ 18(3) ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಅನುಮೋದನೆ ನೀಡಿದೆ.

1. ಪ್ರಸ್ತಾಪಿಸಿದ ಜಮೀನುಗಳನ್ನು ಭೂಸ್ವಾಧೀನದಿಂದ ಹೊರತುಪಡಿಸಲು ನ್ಯಾಯಾಲಯವು ನಿಗಧಿಪಡಿಸಿರುವ ಮಾರ್ಗಸೂಚಿಗಳಡಿಯಲ್ಲಿ ಬರುತ್ತವೆಯೇ ಎಂಬುದನ್ನು ಪ್ರಾಧಿಕಾರವು ಮತ್ತೊಮ್ಮೆ ಖಚಿತಪಡಿಸಿಕೊಳ್ಳತಕ್ಕದ್ದು;
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂಸ್ವಾಧೀನದಿಂದ ಹೊರತುಪಡಿಸಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರದ ಮಂಡಳಿ ಸಭೆಯ ಠರಾವಿನಂತೆ ಇರುವ ಬಗ್ಗೆ ಮತ್ತೊಮ್ಮೆ ಖಚಿತಪಡಿಸಿಕೊಳ್ಳತಕ್ಕದ್ದು.
3. ಸರ್ಕಾರದಿಂದ ಭೂಸ್ವಾಧೀನದಿಂದ ಕೈಬಿಟ್ಟಿರುವ ಪ್ರಕರಣಗಳಲ್ಲಿ, ನ್ಯಾಯಾಲಯದಲ್ಲಿ ಪ್ರಶ್ನಿಸಿ ಪ್ರಕರಣಗಳು ಬಾಕಿ ಇದ್ದಲ್ಲಿ, ಅಂತಹ ಪ್ರಕರಣಗಳು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತವೆ.
4. ಪ್ರಾಧಿಕಾರದ ಪ್ರಸ್ತಾವನೆಯನ್ವಯ ನ್ಯಾಯಾಲಯದ ಆದೇಶದಂತೆ ರಾಚೇನಹಳ್ಳಿ ಗ್ರಾಮದ 2 ಎಕರೆ 37 ಗುಂಟೆ ಜಮೀನನ್ನು ಹೊರತುಪಡಿಸಲು ಪ್ರಾಧಿಕಾರವು ತೆಗೆದುಕೊಂಡಿರುವ ನಿರ್ಧಾರವನ್ನು ಪ್ರಾಧಿಕಾರದ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳತಕ್ಕದ್ದು.
5. ಆದೇಶ ಸಂ. ಯುಡಿಡಿ 193 ಎಂಎನ್‌ಎಕ್ಸ್ 2004, ದಿನಾಂಕ:21.02.2004 ರಂದು ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳು ಮುಂದುವರಿಯತಕ್ಕದ್ದು.

ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂ. 17278-85/2013 (ಎಲ್‌ಎ-ಬಿಡಿಎ) ದಿನಾಂಕ 19.04.2013 ಮತ್ತು ನ್ಯಾಯಾಲಯ ನಿಂದನಾ ಅರ್ಜಿ ಸಂ. 20-24/2014 ದಿನಾಂಕ: 30.01.2014 ರ ಆದೇಶವನ್ನು ಅನುಷ್ಠಾನಗೊಳಿಸಲು ಮುಖ್ಯ ಚುನಾವಣಾಧಿಕಾರಿಗಳ ಸಹಮತಿ ಪಡೆದು ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಹನುಮಂತಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – III	ಬೆಂಗಳೂರು, ಶುಕ್ರವಾರ, ಮಾರ್ಚ್ ೧೪, ೨೦೧೪ (ಫಾಲ್ಗುಣ ೨೩, ಶಕ ವರ್ಷ ೧೯೩೫)	ನಂ. ೨೨೭
Part – III	Bangalore, Friday, March 14, 2014 (Phalguna 23, Shaka Varsha 1935)	No. 227

KARNATAKA ELECTRICITY REGULATORY COMMISSION BANGALORE-560 001

NOTIFICATION

No: J/O2/1/2366 /2376, Bangalore, dated: 13th March, 2014

Sub: Renomination of Members of State Advisory Committee of the Commission.

In exercise of the powers conferred under sub section (1) of section 87 of the Electricity Act, 2003, read with Regulation 3 of the Karnataka Electricity Regulatory Commission (State Advisory Committee) Regulations, 2004, the Karnataka Electricity Regulatory Commission is pleased to renominate the following persons as Members of the State Advisory Committee for a term of three years from the date of this notification.

Sl No.	Name
1	Sri B.G.Rudrappa, Former Chairman –KEB 278/2,9th 'A' Main Road, II Block,Jayanagar, BANGALORE-560 011
2	Director General, Central Power Research Institute, (CPRI), Prof. Sir. C. V. Raman Road, Sadashivanagar, BANGALORE–560 080

By Order of the Commission

N. SRIRAMAN
Secretary
Karnataka Electricity Regulatory Commission

ವಿಶೇಷ ರಾಜ್ಯ ಪತ್ರಿಕೆ

ಭಾಗ - III	ಬೆಂಗಳೂರು, ಮಂಗಳವಾರ, ಏಪ್ರಿಲ್ ೧, ೨೦೧೪ (ಚೈತ್ರ ೧೧, ಶಕ ವರ್ಷ ೧೯೩೬)	ನಂ. ೨೫೨
Part – III	Bangalore, Tuesday, April 1, 2014 (Chaithra 11, Shaka Varsha 1936)	No. 252

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 425 ಜಿಪಅ 2013(2), ಬೆಂಗಳೂರು, ದಿನಾಂಕ: 01.04.2014

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 29.03.2014ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ:

1. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿಸೂಚನೆ ಸಂಖ್ಯೆ: ಗ್ರಾಅಪ 139 ಸೇಶಿಕಾ 99 ದಿನಾಂಕ: 24.05.2008.
2. ಲೋಕೋಪಯೋಗಿ ಇಲಾಖೆಯ ಅನಧಿಕೃತ ಟಿಪ್ಪಣಿಗಳು ಸಂಖ್ಯೆ; ಲೋಇ 315 ಸೇಸಕಿ 2012 ದಿನಾಂಕ: 08.01.2013 ಹಾಗೂ ಲೋಇ 37 ಸೇಸಕಿ 2013 ದಿನಾಂಕ: 08.08.2013
3. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 310 ಜಿಪಅ 2013 ದಿನಾಂಕ: 07.10.2013.
4. ಸರ್ಕಾರದ ಅಧಿಸೂಚನೆ ಸಂಖ್ಯೆ; ಲೋಇ 98 ಸೇಸಕಿ 2008 ದಿನಾಂಕ: 15.11.2010.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಡಿ ಬರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲೇಖಿತ (1)ರ ದಿನಾಂಕ: 24.05.2008ರ ಅಧಿಸೂಚನೆಯಲ್ಲಿ ರಚಿಸಲಾಗಿದೆ. ಈ ನಿಯಮಗಳ ನಿಯಮ 2(2)ರ ಪ್ರಕಾರ, ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು ಸಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳಲು ಆಸಕ್ತಿ ಹೊಂದಿದ್ದಲ್ಲಿ ಅಂತಹವರು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಿದ ದಿನಾಂಕದಿಂದ ಮೂರು ತಿಂಗಳ ಕಾಲಾವಧಿಯೊಳಗಾಗಿ ಹಿಂಪಡೆಯಲಾಗದಂತಹ ಇಚ್ಛೆಯನ್ನು ವ್ಯಕ್ತಪಡಿಸಿದಲ್ಲಿ ಅಂತಹವರ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ರೀತಿ ವಿಲೀನಗೊಳ್ಳುವವರ ಅಂತರ್ ಜೇಷ್ಠತೆಯನ್ನು (*inter-se* seniority) ಅವರ ಮಾತೃ ಇಲಾಖೆಯಲ್ಲಿನ ಜೇಷ್ಠತೆಯನ್ನು ಆಧರಿಸಿ ಹಾಗೂ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತೆ ನಿಯಮಗಳು 1957ರ ಪ್ರಕಾರ ನಿಗದಿಪಡಿಸಲಾಗುವುದೆಂದು ತಿಳಿಸಲಾಗಿದೆ.

ಮೇಲ್ಕಂಡಂತೆ ಕಲ್ಪಿಸಲಾಗಿದ್ದ ಅವಕಾಶದನ್ವಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಾತಿ ಹೊಂದಲು ವಿವಿಧ ವೃಂದಗಳ ಅಧಿಕಾರಿ / ನೌಕರರು ಅಭಿಮತವನ್ನು ವ್ಯಕ್ತಪಡಿಸಿದ್ದರು. ಸದರಿ ವಿಲೀನಾತಿ ಹೊಂದಲು ವ್ಯಕ್ತಪಡಿಸಿದ್ದ ಅಭಿಮತಗಳನ್ನು ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಕಳುಹಿಸಿ ಸಹಮತಿ / ಅಭಿಪ್ರಾಯ ಕೋರಲಾಗಿ, ಉಲ್ಲೇಖ (2)ರ ಅನಧಿಕೃತ ಟಿಪ್ಪಣಿಯಲ್ಲಿ ಸಹಾಯಕ ಇಂಜಿನಿಯರ್ ವೃಂದದ 13 ಅಧಿಕಾರಿಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲು ಸಹಮತಿಯನ್ನು ನೀಡಿತ್ತು. ಅದರನುಸಾರ, ಇತರೆ ಅಧಿಕಾರಿಗಳನ್ನೊಳಗೊಂಡಂತೆ, ಸದರಿ 13 ಸಹಾಯಕ ಇಂಜಿನಿಯರ್‌ಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(ಎ)(ii) ರನ್ವಯ ವಿಲೀನಗೊಳಿಸಿ ಉಲ್ಲೇಖಿತ (3)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಸದರಿ ವಿಲೀನಾತಿ ಆದೇಶದಲ್ಲಿ ಈಗಾಗಲೇ ನಿಯೋಜನೆ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ವಿಲೀನಾತಿ ನಂತರವೂ ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ ಎಂದು ಹಾಗೂ ಉಳಿದ ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಾತಿ ಆದೇಶವನ್ನು ಅನುಸರಿಸಿ ಕಾರ್ಯವರದಿ ಮಾಡಿಕೊಂಡ ನಂತರ ಸ್ಥಳನಿಯುಕ್ತಿ ಮಾಡಲಾಗುವುದೆಂದು ತಿಳಿಸಲಾಗಿತ್ತು. ಸದರಿ ವಿಲೀನಗೊಳಿಸಿದ ಸಹಾಯಕ ಇಂಜಿನಿಯರ್‌ಗಳ ಪೈಕಿ ನಾಲ್ವರು ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇದುವರೆಗೂ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ.

ಮೇಲ್ಕಂಡಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಯಲ್ಲಿ ವಿಲೀನಗೊಂಡು ಕಾರ್ಯವರದಿ ಮಾಡಿಕೊಂಡಿರುವ ಸಹಾಯಕ ಇಂಜಿನಿಯರ್‌ಗಳ ವೃಂದದ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, ಈ ಕುರಿತಂತೆ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸಲಾಗಿದೆ:–

1) ಸಹಾಯಕ ಇಂಜಿನಿಯರ್ ವೃಂದದಲ್ಲಿ ಲೋಕೋಪಯೋಗಿ ಇಲಾಖೆಯು ಉಲ್ಲೇಖಿತ (4)ರ ಅಧಿಸೂಚನೆ ದಿನಾಂಕ: 23.03.2009ರಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿರುವ ಅಂತರ್ ಜೇಷ್ಠತೆ (*inter-se* seniority) ಅನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

2) ಸಹಾಯಕ ಇಂಜಿನಿಯರ್ ವೃಂದದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಗೊಂಡಿರುವ 13 ಅಧಿಕಾರಿಗಳ ಪೈಕಿ ಮೂವರು ಅಧಿಕಾರಿಗಳು ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 32ರ ಅಡಿಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದೆ. ಸದರಿ ಸ್ವತಂತ್ರ ಪ್ರಭಾರವು ಲೋಕೋಪಯೋಗಿ ಇಲಾಖೆಯಲ್ಲಿ ಮಾಡಿಕೊಂಡಿರುವ ಕಾರ್ಯವ್ಯವಸ್ಥೆಯಾಗಿರುವ ಕಾರಣ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ವೃಂದದಲ್ಲಿ ಸದರಿ ಅಧಿಕಾರಿಗಳ ಜೇಷ್ಠತೆಯನ್ನು ನಿಗದಿಪಡಿಸಲು ಮಾತ್ರ ಪರಿಗಣಿಸಲಾಗಿದೆ.

3) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಿದ ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳದಿರುವ ಸಹಾಯಕ ಇಂಜಿನಿಯರ್‌ಗಳನ್ನು ಸದರಿ ವೃಂದದಲ್ಲಿ ಈಗ ಜೇಷ್ಠತೆ ನಿಗದಿಪಡಿಸಲು ಪರಿಗಣಿಸಿರುವುದಿಲ್ಲ.

4) ಸಹಾಯಕ ಇಂಜಿನಿಯರ್ ವೃಂದದಲ್ಲಿ ಇನ್ನು ಮುಂದೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳುವವರ ಜೇಷ್ಠತೆಯನ್ನು ಅವರ ಮಾತೃ ಇಲಾಖೆಯಲ್ಲಿನ ಅಂತರ್ ಜೇಷ್ಠತೆ (*inter-se* seniority) ಯನ್ನು ಆಧರಿಸಿ ಕಾಪಾಡಲಾಗುವುದು.

ಮೇಲ್ಕಂಡ ಅಂಶಗಳನ್ನು ಆಧರಿಸಿ ತಯಾರಿಸಿದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 29.03.2014ರಲ್ಲಿದ್ದಂತೆ ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಾಗುವ ಅಧಿಕಾರಿಗಳು ಆಕ್ಷೇಪಣೆ/ ಸಲಹೆ ಏನಾದರೂ ಇದ್ದಲ್ಲಿ ಈ ಅಧಿಸೂಚನೆ ಪ್ರಕಟಿಸಿದ 15 ದಿವಸಗಳೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ / ಸಲಹೆ ಬಾರದಿದ್ದಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿದ್ದೇಶ್ ಪೋತಲಕಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅಧಿಸೂಚನೆ ಸಂಖ್ಯೆ ಗ್ರಾಅಪ 425 ಜಿಪಅ 2013 (2) ದಿನಾಂಕ 01.04.2014ಕ್ಕೆ ಅನುಬಂಧ

ದಿನಾಂಕ 29-03-2014ರಲ್ಲಿದ್ದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಇಂಜಿನಿಯರ್ (ಗ್ರೂಪ್-ಬಿ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

ಕ್ರ. ಸಂ.	ಲೋ.ಇ.ಯು ಪ್ರಕಟಿಸಿರುವ ಸ.ಇಂ. ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಅಂತರ್ ಜೇಷ್ಠತಾ ಕ್ರ.ಸಂ.	ಅಧಿಕಾರಿಯ ಹೆಸರು ಶ್ರೀಯುತರು	ಹುಟ್ಟಿದ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಸ.ಇಂ. ವೃಂದದಲ್ಲಿನ ಅರ್ಹತಾ ದಿನಾಂಕ	ಷರಾ
1.	1428	ಎಸ್. ಶಶಿಧರ್	05.01.1960	02.05.1984	11.04.1984	
2.	1958	ವಿ.ಆರ್.ದೇಶಪಾಂಡೆ	11.01.1957	30.04.1984	11.04.1984	
3.	2091	ಅಜಿತ್‌ಕುಮಾರ್ ಜೆ. ಪಾಟೀಲ್	06.03.1959	30.04.1984	11.04.1984	
	2545	ಹೆಚ್.ಎಂ.ಲಿಂಗರಾಜ್	10.08.1960	04.11.1987	11.09.1987	ಇವರನ್ನು ಸರ್ಕಾರಿ ಆದೇಶ ಸಂ: ಗ್ರಾಅಪ 310 ಜಿಪಅ 2013 ದಿ: 7.10.2013 ರಲ್ಲಿ ಪಂ.ರಾ.ಇಂ.ಇಲಾಖೆಯ ಸೇವೆಯಲ್ಲಿ ವಿಲೀನ ಗೊಳಿಸಲಾಗಿದೆ. ಆದರೆ ಇವರು ಗ್ರಾಅಪ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳ ದಿರುವುದರಿಂದ ಇವರ ಹೆಸರನ್ನು ಪಂ.ರಾಜ್ ಇಂ.ಇಲಾಖೆಯ ಜೇಷ್ಠತೆಯಲ್ಲಿ ಪರಿಗಣಿಸಿರುವುದಿಲ್ಲ.
4.	2721	ಎಸ್.ಕೆಂಪೇಗೌಡ	25.07.1957	16.10.1987	11.09.1987	
5.	3055	ಸಂಭಾಜಿ ಶಿವಾಜಿ ಅತ್ತರವಾಲ್	01.05.1961	12.01.1987	19.03.1991	
6.	3077	ಗುರುಪಾದಗೌಡ ಬಿ. ಗಿರಡ್ಡಿ	25.03.1960	28.03.1987	19-03-1991	
7.	3096	ಮಹೇಶ್ವರಪ್ಪ ಎಸ್.ಎನ್.	06.07.1960	20.03.1987	19.03.1991	
8.	3521ಎ	ಕೆ.ಸಿ.ಸಂಗಪ್ಪ	12.09.1963	03.12.1994	07.06.1996	
9.	3548	ಅಮರಪ್ಪ ಎಂ. ಹೊಸಪೇಟೆ	25.07.1965	01.01.1990	13.08.1996	

ಟಿಪ್ಪಣಿ :-ಶ್ರೀ ಬಿ.ಜಿ.ಭಾಸ್ಕರ್, ಶ್ರೀ ಪಿ.ಮಾಲತೇಶ್ ಮತ್ತು ಶ್ರೀ ನಾರಾಯಣಿ, ಸಹಾಯಕ ಇಂಜಿನಿಯರ್‌ಗಳು ಇವರ ಸೇವೆಯನ್ನು ಸರ್ಕಾರಿ ಆದೇಶ ಸಂ: ಗ್ರಾಅಪ 310 ಜಿಪಅ 2013 ದಿ: 7.10.2013 ರಲ್ಲಿ ಪಂ.ರಾ.ಇಂ. ಇಲಾಖೆಯಲ್ಲಿ ವಿಲೀನಗೊಳಿಸಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಇವರುಗಳ ನೇಮಕಾತಿಗೆ ಸಂಬಂಧಿಸಿದ ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಂ: 22408-22423/2012ರಲ್ಲಿ ಬಾಕಿ ಇರುತ್ತವೆ. ಹಾಗಾಗಿ ಇವರುಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿಯೇ ಸಹಾಯಕ ಇಂಜಿನಿಯರ್ ವೃಂದದಲ್ಲಿ ಜೇಷ್ಠತೆಯನ್ನು ನಿಗದಿಪಡಿಸಿರುವುದಿಲ್ಲ. ಅಲ್ಲದೆ ಈ ಮೂವರು ಅಧಿಕಾರಿಗಳು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳದಿರುವುದರಿಂದ ಇವರ ಹೆಸರುಗಳನ್ನು ಪಂಚಾಯತಿ ರಾಜ್ ಇಂಜಿನಿಯರಿಂಗ್ ಇಲಾಖೆಯ ಜೇಷ್ಠತೆಯಲ್ಲಿ ಪರಿಗಣಿಸಿರುವುದಿಲ್ಲ.

ಸಿದ್ದೇಶ್ ಪೋತಲಕಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – III	ಬೆಂಗಳೂರು, ಮಂಗಳವಾರ, ಏಪ್ರಿಲ್ ೧, ೨೦೧೪ (ಚೈತ್ರ ೧೧, ಶಕ ವರ್ಷ ೧೯೩೬)	ನಂ. ೨೫೩
Part – III	Bangalore, Tuesday, April 1, 2014 (Chaithra 11, Shaka Varsha 1936)	No. 253

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 425 ಜಿಪಅ 2013(1), ಬೆಂಗಳೂರು, ದಿನಾಂಕ: 01.04.2014

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ದಿನಾಂಕ: 29.03.2014ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ:

1. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿಸೂಚನೆ ಸಂಖ್ಯೆ: ಗ್ರಾಅಪ 139 ಸೇಶಿಕಾ 99 ದಿನಾಂಕ: 24.05.2008.
2. ಲೋಕೋಪಯೋಗಿ ಇಲಾಖೆಯ ಅನಧಿಕೃತ ಟಿಪ್ಪಣಿಗಳು ಸಂಖ್ಯೆ: ಲೋಇ 315 ಸೇಸಕಿ 2012 ದಿನಾಂಕ: 08.01.2013 ಹಾಗೂ ಲೋಇ 37 ಸೇಸಕಿ 2013 ದಿನಾಂಕ: 08.08.2013
3. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 341 ಜಿಪಅ 2012 ದಿನಾಂಕ: 07.09.2013 ಮತ್ತು ಗ್ರಾಅಪ 310 ಜಿಪಅ 2013 ದಿನಾಂಕ: 07.10.2013.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯೂಡಿ 180 ಎಸ್‌ಎಜಿ 2008 ದಿನಾಂಕ: 23.03.2009.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಲೋಇ 98 ಸೇಸಕಿ 2008 ದಿನಾಂಕ: 15.11.2010.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಡಿ ಬರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲೇಖಿತ (1)ರ ದಿನಾಂಕ: 24.05.2008ರ ಅಧಿಸೂಚನೆಯಲ್ಲಿ ರಚಿಸಲಾಗಿದೆ. ಈ ನಿಯಮಗಳ ನಿಯಮ 2(2)ರ ಪ್ರಕಾರ, ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಸಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳಲು ಆಸಕ್ತಿ ಹೊಂದಿದ್ದಲ್ಲಿ ಅಂತಹವರು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಿದ ದಿನಾಂಕದಿಂದ ಮೂರು ತಿಂಗಳ ಕಾಲಾವಧಿಯೊಳಗಾಗಿ ಹಿಂಪಡೆಯಲಾಗದಂತಹ ಇಚ್ಚೆಯನ್ನು ವ್ಯಕ್ತಪಡಿಸಿದಲ್ಲಿ ಅಂತಹವರ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ರೀತಿ ವಿಲೀನಗೊಳ್ಳುವವರ ಅಂತರ್ ಜೇಷ್ಠತೆಯನ್ನು (*inter-se* seniority) ಅವರ ಮಾತೃ ಇಲಾಖೆಯಲ್ಲಿನ ಜೇಷ್ಠತೆಯನ್ನು ಆಧರಿಸಿ ಹಾಗೂ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತೆ ನಿಯಮಗಳು 1957ರ ಪ್ರಕಾರ ನಿಗದಿಪಡಿಸಲಾಗುವುದೆಂದು ತಿಳಿಸಲಾಗಿದೆ.

ಮೇಲ್ಕಂಡಂತೆ ಕಲ್ಪಿಸಲಾಗಿದ್ದ ಅವಕಾಶದನ್ವಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಾತಿ ಹೊಂದಲು ವಿವಿಧ ವೃಂದಗಳ ಅಧಿಕಾರಿ / ನೌಕರರು ಅಭಿಮತವನ್ನು ವ್ಯಕ್ತಪಡಿಸಿದ್ದರು. ಸದರಿ ವಿಲೀನಾತಿ ಹೊಂದಲು ವ್ಯಕ್ತಪಡಿಸಿದ್ದ ಅಭಿಮತಗಳನ್ನು ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಕಳುಹಿಸಿ ಸಹಮತಿ / ಅಭಿಪ್ರಾಯ ಕೋರಲಾಗಿ, ಉಲ್ಲೇಖ (2)ರ ಅನಧಿಕೃತ ಟಿಪ್ಪಣಿಗಳಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ 10 ಅಧಿಕಾರಿಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲು ಸಹಮತಿಯನ್ನು ನೀಡಿತ್ತು. ಅದರನುಸಾರ, ಇತರೆ ಅಧಿಕಾರಿಗಳನ್ನೊಳಗೊಂಡಂತೆ, ಸದರಿ ಹತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(ಎ)(ii) ರನ್ವಯ ವಿಲೀನಗೊಳಿಸಿ ಉಲ್ಲೇಖಿತ (3)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಸದರಿ ವಿಲೀನಾತಿ ಆದೇಶದಲ್ಲಿ ಈಗಾಗಲೇ ನಿಯೋಜನೆ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ವಿಲೀನಾತಿ ನಂತರವೂ ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ ಎಂದು ಹಾಗೂ ಉಳಿದ ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಾತಿ ಆದೇಶವನ್ನು ಅನುಸರಿಸಿ ಕಾರ್ಯವರದಿ ಮಾಡಿಕೊಂಡ ನಂತರ ಸ್ಥಳನಿಯುಕ್ತಿ ಮಾಡಲಾಗುವುದೆಂದು ತಿಳಿಸಲಾಗಿತ್ತು. ಸದರಿ ವಿಲೀನಗೊಳಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ಪೈಕಿ ಶ್ರೀ ಆರ್.ವಿ.ದೇಶಪಾಂಡೆ ರವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇದುವರೆಗೂ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ.

ಮೇಲ್ಕಂಡಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಯಲ್ಲಿ ವಿಲೀನಗೊಂಡು ಕಾರ್ಯವರದಿ ಮಾಡಿಕೊಂಡಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳ ವೃಂದದ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, ಈ ಕುರಿತಂತೆ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸಲಾಗಿದೆ:–

1) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ ಸಹಾಯಕ ಇಂಜಿನಿಯರ್ ವೃಂದಗಳಲ್ಲಿ ಲೋಕೋಪಯೋಗಿ ಇಲಾಖೆಯು ಕ್ರಮವಾಗಿ ಉಲ್ಲೇಖಿತ (4) ಮತ್ತು (5)ರ ಅಧಿಸೂಚನೆಗಳಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಗಳಲ್ಲಿ ನಿಗದಿಪಡಿಸಿರುವ ಅಂತರ್ ಜೇಷ್ಠತೆ (*inter-se* seniority) ಅನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.
2) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಗೊಂಡಿರುವ ಹತ್ತು ಅಧಿಕಾರಿಗಳ ಪೈಕಿ ಮೂವರು ಅಧಿಕಾರಿಗಳು ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 32ರ ಅಡಿಯಲ್ಲಿ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಸ್ವತಂತ್ರ ಪ್ರಭಾರದಲ್ಲಿ ಇರಿಸಲಾಗಿದೆ. ಈ ಪೈಕಿ ಓರ್ವ ಅಧಿಕಾರಿಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ. ಸದರಿ ಸ್ವತಂತ್ರ ಪ್ರಭಾರವು ಲೋಕೋಪಯೋಗಿ ಇಲಾಖೆಯಲ್ಲಿ ಮಾಡಿಕೊಂಡಿರುವ ಕಾರ್ಯವ್ಯವಸ್ಥೆಯಾಗಿರುವ ಕಾರಣ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಸದರಿ ಅಧಿಕಾರಿಗಳ ಜೇಷ್ಠತೆಯನ್ನು ನಿಗದಿಪಡಿಸಲು ಮಾತ್ರ ಪರಿಗಣಿಸಲಾಗಿದೆ.
3) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಿದ ನಂತರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯವರದಿ ಮಾಡಿಕೊಳ್ಳದಿರುವ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳನ್ನು ಸದರಿ ವೃಂದದಲ್ಲಿ ಈಗ ಜೇಷ್ಠತೆ ನಿಗದಿಪಡಿಸಲು ಪರಿಗಣಿಸಿರುವುದಿಲ್ಲ.
4) ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಇನ್ನು ಮುಂದೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳುವವರ ಜೇಷ್ಠತೆಯನ್ನು ಅವರ ಮಾತೃ ಇಲಾಖೆಯಲ್ಲಿನ ಅಂತರ್ ಜೇಷ್ಠತೆ (*inter-se* seniority) ಯನ್ನು ಆಧರಿಸಿ ಕಾಪಾಡಲಾಗುವುದು.

ಮೇಲ್ಕಂಡ ಅಂಶಗಳನ್ನು ಆಧರಿಸಿ ತಯಾರಿಸಿದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 29.03.2014ರಲ್ಲಿದ್ದಂತೆ ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಜೇಷ್ಠತಾ ಪಟ್ಟಿಯಿಂದ ಬಾಧಿತರಾಗುವ ಅಧಿಕಾರಿಗಳು ಆಕ್ಷೇಪಣೆ/ ಸಲಹೆ ಏನಾದರೂ ಇದ್ದಲ್ಲಿ ಈ ಅಧಿಸೂಚನೆ ಪ್ರಕಟಿಸಿದ 15 ದಿವಸಗಳೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಮಹಡಿ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ / ಸಲಹೆ ಬಾರದಿದ್ದಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮವಹಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿದ್ದೇಶ್ ಪೋತಲಕಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಅಧಿಸೂಚನೆ ಸಂಖ್ಯೆ ಗ್ರಾಅಪ 425 ಜಿಪಅ 2013 (1) ದಿನಾಂಕ 01.04.2014ಕ್ಕೆ ಅನುಬಂಧ

ದಿನಾಂಕ 29-03-2014ರಲ್ಲಿದ್ದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಗ್ರೂಪ್-ಎ) ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿ

ಕ್ರ. ಸಂ.	ಲೋ.ಇ.ಯು ಪ್ರಕಟಿಸಿರುವ ಸ.ಕಾ.ಇಂ. (ವಿಭಾಗ-1) / ಸ.ಇಂ. ವೃಂದದ ಅಂತಿಮ ಜೇಷ್ಠತಾ ಪಟ್ಟಿ ಯಲ್ಲಿನ ಅಂತರ್ ಜೇಷ್ಟತಾ ಕ್ರ.ಸಂ.	ಹೆಸರು ಶ್ರೀಯುತರು	ಹುಟ್ಟಿದ ದಿನಾಂಕ	ಸ.ಕಾ.ಇಂ. ವೃಂದಕ್ಕೆ ಪದೋನ್ನತಿ ಹೊಂದಿದ ದಿನಾಂಕ	ಸ.ಕಾ.ಇಂ. ವೃಂದಕ್ಕೆ ಪದೋನ್ನತಿ ಹೊಂದಲು ಅರ್ಹತಾ ದಿನಾಂಕ	ಷರಾ
1.	3138	ಕೆ.ಎಂ.ನಾಗರಾಜ್	01-08-1955	02-05-2002	05-07-2002	
	3235	ಆರ್.ವಿ.ದೇಶಪಾಂಡೆ	30-08-1955	05-10-2002	05-10-2002	ಇವರನ್ನು ಸರ್ಕಾರಿ ಆದೇಶ ಸಂ: ಗ್ರಾಅಪ 310 ಜಿಪಅ 2013 ದಿ: 7.10.2013 ರಲ್ಲಿ ಪಂ.ರಾ.ಇಂ.ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. ಆದರೆ ಇವರು ಗ್ರಾಅಪ ಇಲಾಖೆ ಯಲ್ಲಿ ಕಾರ್ಯವರದಿ ಮಾಡಿಕೊಳ್ಳದಿರುವುದರಿಂದ ಇವರ ಹೆಸರನ್ನು ಪಂ.ರಾಜ್ ಇಂ.ಇಲಾಖೆಯ ಜೇಷ್ಟತೆಯಲ್ಲಿ ಪರಿಗಣಿಸಿರುವುದಿಲ್ಲ.
2.	3283	ಎಸ್.ಉಮೇಶ್	28-05-1954	05-10-2002	05-10-2002	
3.	3288	ಕೆ.ಸಿದ್ಧನಗೌಡ	01-06-1954	05-10-2002	05-10-2002	
4.	3435	ಎಸ್.ಎ.ಪಾಟೀಲ್	20-03-1957	21-04-2003	21-04-2003	
5.	3654	ಎಂ.ನಾಗರಾಜ್	20-05-1954	20-02-2004	20-02-2004	
6.	ಸ. ಇಂ. ಜೇ.ಕ್ರ..ಸಂ. 550	ಟಿ.ಎಸ್.ಲೋಕೇಶ್	15-02-1959	09-09-2005	09-09-2005	ಲೋಕೋಪಯೋಗಿ ಇಲಾಖೆಯು ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿಭಾಗ-1)ರ ಅಂತಿಮ ಜೇಷ್ಟತಾ ಪಟ್ಟಿಯನ್ನು ದಿನಾಂಕ 23.3.2009 ರಲ್ಲಿ ಪ್ರಕಟಿಸಿದೆ. ಆ ನಂತರ ಮುಂದುವರೆದ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಲು ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣ ಪ್ರಕಟಿಸಿರುವುದಿಲ್ಲ. ಆದುದರಿಂದ ಕ್ರಮ: 6 ರಿಂದ 9ರ ಈ 4 ಅಧಿಕಾರಿಗಳಿಗೆ ಸಂಬಂಧಿಸಿದಂತೆ ಲೋ.ಇ.ಯು ಪ್ರಕಟಿಸಿರುವ ಸ.ಇಂ. ವೃಂದದ ಅಂತಿಮ ಜೇಷ್ಟತಾ ಪಟ್ಟಿಯಲ್ಲಿನ ಅಂತರ್ ಜೇಷ್ಟತೆಯನ್ನು ಪರಗಣನೆಗೆ ತೆಗೆದುಕೊಳ್ಳಲಾಗಿದೆ.
7.	ಸ. ಇಂ. ಜೇ.ಕ್ರ..ಸಂ. 616	ಎಂ.ಜಿ.ಕುಲಕರ್ಣಿ	20-06-1956	09-09-2005	09-09-2005	
8.	ಸ. ಇಂ. ಜೇ.ಕ್ರ..ಸಂ.701	ಎ.ಮಂಜುನಾಥ್	22-12-1958	09-09-2005	09-09-2005	
9.	ಸ. ಇಂ. ಜೇ.ಕ್ರ.ಸಂ. 1113	ಚಂದ್ರಶೇಖರ್ ಎಸ್. ಸುಲೇಪೇಟಕರ್	17-08-1957	24-08-2007	24-08-2007	

ಸಿದ್ದೇಶ್ ಪೋತಲಕಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ವಿಶೇಷ ರಾಜ್ಯ ಪತ್ರಿಕೆ

ಭಾಗ – III	ಬೆಂಗಳೂರು, ಮಂಗಳವಾರ, ಏಪ್ರಿಲ್ ೧, ೨೦೧೪ (ಚೈತ್ರ ೧೧, ಶಕ ವರ್ಷ ೧೯೩೬)	ನಂ. ೨೫೪
Part – III	Bangalore, Tuesday, April 1, 2014 (Chaithra 11, Shaka Varsha 1936)	No. 254

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 425 ಜಿಪಅ 2013, ಬೆಂಗಳೂರು, ದಿನಾಂಕ: 01.04.2014

ವಿಷಯ: ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ: 29.03.2014ರಲ್ಲಿದ್ದಂತೆ ಪ್ರಕಟಿಸುವ ಬಗ್ಗೆ.

ಉಲ್ಲೇಖ:

1. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಅಧಿಸೂಚನೆ ಸಂಖ್ಯೆ: ಗ್ರಾಅಪ 139 ಸೇಶಿಕಾ 99 ದಿನಾಂಕ: 24.05.2008.
2. ಲೋಕೋಪಯೋಗಿ ಇಲಾಖೆಯ ಅನಧಿಕೃತ ಟಿಪ್ಪಣಿಗಳು ಸಂಖ್ಯೆ: ಲೋಇ 37 ಸೇಸಕಿ 2013 ದಿನಾಂಕ: 08.08.2013.
3. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 341 ಜಿಪಅ 2012 ದಿನಾಂಕ: 07.09.2013 ಮತ್ತು ಗ್ರಾಅಪ 310 ಜಿಪಅ 2013 ದಿನಾಂಕ: 07.10.2013.
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಬ್ಲ್ಯೂಡಿ 156 ಎಸ್‌ಪಿಜಿ 2009 ದಿನಾಂಕ: 02.01.2010.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಡಿ ಬರುವ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲೇಖಿತ (1)ರ ದಿನಾಂಕ: 24.05.2008ರ ಅಧಿಸೂಚನೆಯಲ್ಲಿ ರಚಿಸಲಾಗಿದೆ. ಈ ನಿಯಮಗಳ ನಿಯಮ 2(2)ರ ಪ್ರಕಾರ, ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಸಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳಲು ಆಸಕ್ತಿ ಹೊಂದಿದ್ದಲ್ಲಿ ಅಂತಹವರು ಸದರಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಹೊರಡಿಸಿದ ದಿನಾಂಕದಿಂದ ಮೂರು ತಿಂಗಳ ಕಾಲಾವಧಿಯೊಳಗಾಗಿ ಹಿಂಪಡೆಯಲಾಗದಂತಹ ಇಚ್ಛೆಯನ್ನು ವ್ಯಕ್ತಪಡಿಸಿದಲ್ಲಿ ಅಂತಹವರ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ರೀತಿ ವಿಲೀನಗೊಳ್ಳುವವರ ಅಂತರ್ ಜೇಷ್ಠತೆಯನ್ನು (*inter-se* seniority) ಅವರ ಮಾತೃ ಇಲಾಖೆಯಲ್ಲಿನ ಜೇಷ್ಠತೆಯನ್ನು ಆಧರಿಸಿ ಹಾಗೂ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತೆ ನಿಯಮಗಳು 1957ರ ಪ್ರಕಾರ ನಿಗದಿಪಡಿಸಲಾಗುವುದೆಂದು ತಿಳಿಸಲಾಗಿದೆ.

ಮೇಲ್ಕಂಡಂತೆ ಕಲ್ಪಿಸಲಾಗಿದ್ದ ಅವಕಾಶದನ್ವಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಾತಿ ಹೊಂದಲು ವಿವಿಧ ವೃಂದಗಳ ಅಧಿಕಾರಿ / ನೌಕರರು ಅಭಿಮತವನ್ನು ವ್ಯಕ್ತಪಡಿಸಿದ್ದರು. ಸದರಿ ವಿಲೀನಾತಿ ಹೊಂದಲು ವ್ಯಕ್ತಪಡಿಸಿದ್ದ ಅಭಿಮತಗಳನ್ನು ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಕಳುಹಿಸಿ ಸಹಮತಿ / ಅಭಿಪ್ರಾಯ ಕೋರಲಾಗಿ, ಉಲ್ಲೇಖ (2)ರ ಅನಧಿಕೃತ ಟಿಪ್ಪಣಿ ದಿನಾಂಕ: 08.08.2013ರಲ್ಲಿ ಕಾರ್ಯಪಾಲಕ ಇಂಜಿನಿಯರ್ ವೃಂದದ ನಾಲ್ವರು ಅಧಿಕಾರಿಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲು ಸಹಮತಿಯನ್ನು ನೀಡಿತ್ತು. ಅದರನುಸಾರ, ಇತರೆ ಅಧಿಕಾರಿಗಳನ್ನೊಳಗೊಂಡಂತೆ, ಸದರಿ ನಾಲ್ವರು ಕಾರ್ಯಪಾಲಕ ಇಂಜಿನಿಯರ್‌ಗಳ ಸೇವೆಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸೇವೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(ಎ)(ii) ರನ್ವಯ ವಿಲೀನಗೊಳಿಸಿ ಉಲ್ಲೇಖಿತ (3)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಸದರಿ ವಿಲೀನಾತಿ ಆದೇಶದಲ್ಲಿ ಈಗಾಗಲೇ ನಿಯೋಜನೆ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ವಿಲೀನಾತಿ ನಂತರವೂ ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ ಎಂದು ಹಾಗೂ ಉಳಿದ ಅಧಿಕಾರಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿಲೀನಾತಿ ಆದೇಶವನ್ನು ಅನುಸರಿಸಿ ಕಾರ್ಯವರದಿ ಮಾಡಿಕೊಂಡ ನಂತರ ಸ್ಥಳನಿಯುಕ್ತಿ ಮಾಡಲಾಗುವುದೆಂದು ತಿಳಿಸಲಾಗಿತ್ತು. ಸದರಿ ವಿಲೀನಗೊಳಿಸಿದ ಕಾರ್ಯಪಾಲಕ ಇಂಜಿನಿಯರ್‌ಗಳ ಪೈಕಿ ಶ್ರೀ ಭಜಂತ್ರಿ ಪರಶುರಾಮ್ ಅಡಿವೆಪ್ಪ ಮತ್ತು ಶ್ರೀ ಸಿ.ಕೆ.ಮಲ್ಲಪ್ಪ ಈ ಇಬ್ಬರು ಕಾರ್ಯಪಾಲಕ ಇಂಜಿನಿಯರ್‌ಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಇದುವರೆಗೂ ಕಾರ್ಯವರದಿ ಮಾಡಿಕೊಂಡಿರುವುದಿಲ್ಲ.

ಮೇಲ್ಕಂಡಂತೆ ಪಂಚಾಯತ್ ರಾಜ್ ಇಂಜನಿಯರಿಂಗ್ ಸೇವೆಯಲ್ಲಿ ವಿಲೀನಗೊಂಡು ಕಾರ್ಯವರದಿ ಮಾಡಿಕೊಂಡಿರುವ ಕಾರ್ಯಪಾಲಕ ಇಂಜಿನಿಯರ್‌ಗಳ ವೃಂದದ ಅಧಿಕಾರಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, ಈ ಕುರಿತಂತೆ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪರಿಶೀಲಿಸಲಾಗಿದೆ:–

1) ಕಾರ್ಯಪಾಲಕ ಇಂಜಿನಿಯರ್ ವೃಂದದಲ್ಲಿ ಲೋಕೋಪಯೋಗಿ ಇಲಾಖೆಯು ಉಲ್ಲೇಖಿತ (4)ರ ಅಧಿಸೂಚನೆ ದಿನಾಂಕ: 02.01.2010ರಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿರುವ ಅಂತರ್ ಜೇಷ್ಠತೆ (*inter-se* seniority) ಅನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.
